(ಸದನವು 10 ಗಂಟೆ 22 ನಿಮಿಷಕ್ಕೆ ಪ್ರಾರಂಭವಾಯಿತು

ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

**ಶ್ರೀ ವೈ.ಎಸ್.ವಿ. ದತ್ತಾ (ಕಡೂರು):**– ಮಾನ್ಯ ಸಭಾಧ್ಯಕ್ಷರೇ, ನಾವು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ.

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ) (ದೇವರಹಿಪ್ಪರಗಿ):**– ಮಾನ್ಯ ಸಭಾಧ್ಯಕ್ಷರೆ, ಈ ಭಾಗಕ್ಕೆ ಸಂಬಂಧಪಟ್ಟಂತೆ ಬಹಳ ಪ್ರಮುಖವಾಗಿರುವಂತಹ ವಿಷಯದ ಬಗ್ಗೆ ನನಗೆ ಮಾತನಾಡುವುದಕ್ಕೆ ಎರಡು ನಿಮಿಷಗಳ ಕಾಲ ಅವಕಾಶ ಮಾಡಿಕೊಡಬೇಕು.

## 1. ನಿಲುವಳಿ ಸೂಚನೆ

### (ಮಂಡನೆಗೆ ಅನುಮತಿ ಕೋರಿ ಚರ್ಚೆ)

**ವಿಷಯ:** ಸಂವಿಧಾನದ ಅನುಚ್ಛೇದ 371(ಜೆ) ಅನ್ವಯ ಹೈದರಾಬಾದ್–ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳು ಅನುಷ್ಠಾನವಾಗದಿರುವ ಬಗ್ಗೆ.

**ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):**– ಮಾನ್ಯ ಅಧ್ಯಕ್ಷರೆ, ಹೈದರಾಬಾದ್ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಸಂವಿಧಾನದ ಆರ್ಟಿಕಲ್ 371 (ಜೆ) ಪ್ರಕಾರ ಏನೊಂದು ಕಾರ್ಯಕ್ರಮಗಳ ಅನುಷ್ಠಾನವಾಗಬೇಕಾಗಿತ್ತೋ, ಅದು ಆಗಿಲ್ಲ. ಉದ್ಯೋಗದಲ್ಲಿ ಮೀಸಲಾತಿ, ಶಿಕ್ಷಣದಲ್ಲಿ ಮೀಸಲಾತಿ ಇದ್ಯಾವುದು ಸಂಪರ್ಕವಾಗಿ ಜಾರಿ ಆಗಿಲ್ಲ ಎಂಬ ಬಗ್ಗೆ ಹಿಂದೆ ನಿಲುವಳಿ ಸೂಚನೆಯನ್ನು ಒಂದೊಂದು ಪಕ್ಷದ ಪರವಾಗಿ ಕೊಡುತ್ತಿದ್ದರು. ಆದರೆ, ಆರ್ಟಿಕಲ್ 371 (ಜೆ) ಪ್ರಕಾರ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ನಿರ್ಲಕ್ಷ ಆಗಿದೆ, ಇಲ್ಲಿ ಯಾವುದೇ ಅಭಿವೃದ್ಧಿ ಸಹ ಆಗಿಲ್ಲ ಮತ್ತು ಅದು ಅನುಷ್ಠಾನವಾಗಿಲ್ಲ ಎಂಬ ಬಗ್ಗೆ ಇಡೀ ಸದನದ ಎಲ್ಲಾ ಪಕ್ಷದ ಶಾಸಕರು ಸಹಿ ಮಾಡಿ, ಈ ಬಗ್ಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ.

ಇದು ಬಹಳ ಮಹತ್ವದ ವಿಚಾರವಾಗಿದೆ. ಸಂವಿಧಾನ ತಿದ್ದುಪಡಿ ಜಾರಿಗೆ ಬಂದು, $1^{1/2}$–2 ವರ್ಷಗಳಾಗಿದ್ದರೂ ಸಹ ಕೆಲಸ ಕಾರ್ಯಗಳು ಏನೂ ಆಗುತ್ತಿಲ್ಲ. ಒಟ್ಟಿನಲ್ಲಿ ಹೇಳಬೇಕೆಂದರೆ, ಕಾರ್ಯಕ್ರಮಗಳ ಅನುಷ್ಠಾನ neglect ಆಗುತ್ತಿದೆ. ಶಿಕ್ಷಣದಲ್ಲಿ, ಉದ್ಯೋಗದಲ್ಲಿ ಮೀಸಲಾತಿ ಇರಬಹುದು, ಯಾವುದೂ ಸಹ ಅನುಷ್ಠಾನವಾಗುತ್ತಿಲ್ಲ. ಪ್ಯಾಕೇಜ್ ಎಂದು ವಿಶೇಷವಾದಂಥ ಅನುದಾನ ಏನು ಕೊಟ್ಟಿದ್ದಾರೆಯೋ, ಅದೂ ಸಹ ಖರ್ಚಾಗದೆ ಇರುವಂತಹ ಪರಿಸ್ಥಿತಿ ಇದೆ. ಇವೆಲ್ಲಾ ನೋಡಿದಾಗ, ಹೈದರಾಬಾದ್–ಕರ್ನಾಟಕ 5 ವರ್ಷ ಅಥವಾ 10 ವರ್ಷಗಳ ಹಿಂದೆ ಹೇಗೆ ಇತ್ತೋ, ಇವತ್ತೂ ಸಹ ಹಾಗೆಯೇ ಇದೆ. ಆರ್ಟಿಕಲ್ 371 (ಜೆ) ಬಂದ ಮೇಲೆ ಸ್ವರ್ಗ ಬರುತ್ತದೆಂದು ಜನರು ತಿಳಿದುಕೊಂಡಿದ್ದರು. ಆದರೆ, ಇವತ್ತೂ ಕೂಡ ಅದೇ ಪರಿಸ್ಥಿತಿ ಮುಂದುವರೆದಿದೆ. ಆದ್ದರಿಂದ, ಅದರ ಬಗ್ಗೆ ನಾವೆಲ್ಲರೂ detailed statistics ಉಲ್ಲೇಖಿಸಿ ಚರ್ಚೆ ಮಾಡುತ್ತೇವೆ.

**ಅಧ್ಯಕ್ಷರು:–** ಈಗ ನಾವು ಒಂದು ಕೆಲಸವನ್ನು ಮಾಡೋಣ. ನಾವು business advisory committee ಯಲ್ಲಿ ಚರ್ಚೆ ಮಾಡಿರುವಂತಹ ಸಂದರ್ಭದಲ್ಲಿ ಕೆಲವು ಸೂಕ್ಷ್ಮತೆಗಳನ್ನು ಗಮನದಲ್ಲಿಟ್ಟುಕೊಂಡು, ನಮ್ಮ ಉತ್ತರ ಕರ್ನಾಟಕದ ಬಗ್ಗೆ ಈ angle ನಿಂದ ಚರ್ಚೆ ಮಾಡುವ ಬದಲಾಗಿ ನಾವು ಡಾ॥ ಡಿ.ಎಂ. ನಂಜುಂಡಪ್ಪನವರ ವರದಿಯ ಅನುಷ್ಠಾನದ ಬಗ್ಗೆ ಸಮಗ್ರವಾಗಿ ದಿನಾಂಕ 09.07.2015 ಮತ್ತು 10.07.2015ರಂದು ಚರ್ಚೆ ನಡೆಸಲು ತೀರ್ಮಾನಿಸಲಾಗಿದೆ.

**ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ):–** ಮಾನ್ಯ ಅಧ್ಯಕ್ಷರೆ, ಕೇವಲ ನಂಜುಂಡಪ್ಪ ವರದಿ ಅನುಷ್ಠಾನದಲ್ಲಿ ಮಾತ್ರವಲ್ಲ, ಈ ಭಾಗಕ್ಕೆ ಅನುದಾನ ಕೊಡುವುದರಲ್ಲಿ ಸಹ ತಾರತಮ್ಯವಾಗುತ್ತಿದೆ.

**ಶ್ರೀ ಜಗದೀಶ್ ಶೆಟ್ಟರ್:–** Article 371(j) ಹೈದರಾಬಾದ್–ಕರ್ನಾಟಕ ಭಾಗಕ್ಕೆ ಮಾತ್ರ apply ಆಗುತ್ತದೆ. ಆದ್ದರಿಂದ, ಈ ಬಗ್ಗೆ ನಾವು ವಿಶೇಷವಾಗಿ ಚರ್ಚೆ ಮಾಡಬೇಕಾಗುತ್ತದೆ.

**ಅಧ್ಯಕ್ಷರು:–** ಬಿ.ಎ.ಸಿ. ಮೀಟಿಂಗ್‌ನಲ್ಲಿ ನೀವೂ ಸಹ ಇದ್ದಿರಿ. ಈ ವಿಷಯದ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚೆ ನಡೆಸಲು ಜುಲೈ 9 ಮತ್ತು ಜುಲೈ 10ನೇ ದಿನಾಂಕಗಳನ್ನು ನಾವು ನಿಗದಿಪಡಿಸಿಕೊಂಡಿದ್ದೇವೆ. ಆಗ ನಾವು ಈ ವಿಷಯದ ಬಗ್ಗೆಯೂ ಚರ್ಚೆ ಮಾಡೋಣ.

**ಶ್ರೀ ಜಗದೀಶ್ ಶೆಟ್ಟರ್:–** ತಮ್ಮ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಡಾ॥ ನಂಜುಂಡಪ್ಪನವರ ವರದಿಯ ಅನುಷ್ಠಾನದ ಕುರಿತು ಚರ್ಚೆ ನಡೆಸಲು ತಾವು ಅವಕಾಶವನ್ನು ಕೊಟ್ಟಿದ್ದೀರಿ. ಅದು most backward taluks, backward taluks ಎಂದು ಏನು ಇವೆ, ಅದಕ್ಕೆ ಅದು ಅನ್ವಯವಾಗುತ್ತದೆ. ಆದರೆ ಇವತ್ತು Article 371(j) ಗೆ ಸಂವಿಧಾನದ ತಿದ್ದುಪಡಿ ಮಾಡಿ, ವಿಶೇಷ ಸ್ಥಾನಮಾನ ಏನು ಕೊಟ್ಟರು, ಅದರನ್ವಯ ಏನೊಂದು ಕಾರ್ಯಕ್ರಮಗಳು ಅನುಷ್ಠಾನವಾಗಬೇಕಾಗಿತ್ತೋ, ಅದು ಆಗಲಿಲ್ಲವೆನ್ನುವುದರ ಬಗ್ಗೆ ನನ್ನ ಕೂಗು ಇದೆ.

**ಅಧ್ಯಕ್ಷರು:–** Ok,

**ಶ್ರೀ ಜಗದೀಶ್ ಶೆಟ್ಟರ್:–** ಅದಕ್ಕಾಗಿ separate ಆಗಿ ಚರ್ಚೆ ಮಾಡಬೇಕಾಗುತ್ತದೆ.

**ಅಧ್ಯಕ್ಷರು:–** Ok, ನಿಯಮ 69ರ ಅಡಿಯಲ್ಲಿ ಇದನ್ನೂ ಚರ್ಚೆ ಮಾಡೋಣ.

**(ಮಾನ್ಯ ಸಭಾಧ್ಯಕ್ಷರು ನಿಲುವಳಿ ಸೂಚನೆ ಮಂಡನೆಗೆ ಅನುಮತಿ ನಿರಾಕರಿಸಿದರು ಮತ್ತು ಸದರಿ ವಿಷಯವನ್ನು ನಿಯಮ 69ರ ಅಡಿಯಲ್ಲಿ ಚರ್ಚಿಸಲು ಅವಕಾಶ ನೀಡುವುದಾಗಿ ತಿಳಿಸಿದರು)**

**ಶ್ರೀ ವೈ.ಎಸ್.ವಿ. ದತ್ತಾ:–** ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ತಂದಿರುವಂತಹ ನಿಲುವಳಿ ಸೂಚನೆಯೂ ಕೂಡ ಅತ್ಯಂತ ಮಹತ್ವದ್ದು ಮತ್ತು ಗಂಭೀರವಾಗಿರುವುದಾಗಿದೆ. ಅದಕ್ಕೂ ಸಹ ನಮ್ಮ

ಬೆಂಬಲ ಇದೆ. ಅದರ ಬಗ್ಗೆಯೂ ಸಹ ತಾವು ಚರ್ಚೆ ನಡೆಸಲು ಅವಕಾಶವನ್ನು ಮಾಡಿಕೊಡಬೇಕು.

**ಅಧ್ಯಕ್ಷರು:–** ನೀವು ತಂದಿರುವ ನಿಲುವಳಿ ಸೂಚನೆ ಏನಿದೆ, ಆ ಬಗ್ಗೆ ಹೇಳಿ.

## 2. ನಿಲುವಳಿ ಸೂಚನೆ

### (ಮಂಡನೆಗೆ ಅನುಮತಿ ಕೋರಿ ಚರ್ಚೆ)

**ವಿಷಯ:** ರಾಜ್ಯದ 13 ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ 15000 ಮೆಟ್ರಿಕ್ ಟನ್ ಹಾಲಿನ ಪುಡಿ ದಾಸ್ತಾನಿರುವುದರಿಂದ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಿರುವ ಬಗ್ಗೆ.

**ಶ್ರೀ ವೈ.ಎಸ್.ವಿ. ದತ್ತಾ (ಕಡೂರು):–** ಮಾನ್ಯ ಅಧ್ಯಕ್ಷರೆ, ಈಗ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಹ ತರಹದಲ್ಲಿ ಇನ್ನೊಂದು ದೊಡ್ಡ ಸಮಸ್ಯೆ ಹಾಲು ಉತ್ಪಾದಕರ ಕೊರಳಿಗೆ ಬಂದಿದೆ. ನಾಳೆ ಅಥವಾ ನಾಡಿದ್ದರಿಂದ ಹಾಲು ಉತ್ಪಾದಕರ ಆತ್ಮಹತ್ಯೆ ಆಗಬಾರದೆಂಬ ಆತಂಕಕ್ಕೋಸ್ಕರ ನಾವು ಈ ನಿಲುವಳಿ ಸೂಚನೆಯನ್ನು ತಂದಿದ್ದೇವೆ. ರಾಜ್ಯದಲ್ಲಿ 72 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಆದರೆ ದುರಂತವೆಂದರೆ, ಸುಮಾರು 25 ಲಕ್ಷ ಲೀಟರ್ ಹಾಲು ಹೊರರಾಜ್ಯಗಳಿಗೆ ಸಾಗಾಣಿಕೆಯಾಗಿ, ಅಲ್ಲಿಂದ ಹಾಲಿನಪುಡಿ, ಬೆಣ್ಣೆಯಾಗಿ ಪರಿವರ್ತನೆಯಾಗಿ ಬರುತ್ತಿದೆ. 13 ಹಾಲು ಒಕ್ಕೂಟಗಳು ಇವತ್ತಿನ ದಿವಸ ತೀವ್ರ ನಷ್ಟದಲ್ಲಿವೆ. ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಹಾಲು ಉತ್ಪಾದಕರಾಗಿ ಗೌಳಿಗರು ಇದ್ದಾರೆ, ಅವರಿಗೆ ಒಂದು ಲೀಟರ್‌ಗೆ 4 ರೂ.ಗಳ ದರದಲ್ಲಿ ಕಡಿತವಾಗಿದೆ. ಇವತ್ತು ಹಾಲು ಉತ್ಪಾದನೆ ಮಾಡುವುದಕ್ಕಾಗಿ ದನ ಸಾಕಿಕೊಂಡಿರುವಂತಹ ಜನರೆಲ್ಲರೂ ಬಹಳ ಕಷ್ಟಕ್ಕೆ ಈಡಾಗಿದ್ದಾರೆ. ಅವರ ಪ್ರೋತ್ಸಾಹಧನದ ಬಾಕಿ ಬಿಡುಗಡೆಯಾಗಿಲ್ಲ. ಮತ್ತೆ ಲೀಟರ್‌ಗೆ ದರವೂ ಸಹ ಕಡಿಮೆಯಾಗಿದೆ.